## ಸಂಗೀತವನ್ನು ಜಾತಿಯಿಂದ ಗುರುತಿಸಬೇಕೆ?

ಇತ್ತೀಚೆಗೆ ಝೀ ಕನ್ನಡ ವಾಹಿನಿಯಲ್ಲಿ ಸರಿಗಮಪ 13ಕ್ಕೆ ಆಡಿಶನ್ ನಡೆಯುತ್ತಿದ್ದ ವೇಳೆ ಸಾಗರದ ಸುಹಾನಾ ಸೈಯದ್ ಎಂಬ ಬಾಲಕಿ ಮಧುರವಾಗಿ ಹಾಡಿ ಎಲ್ಲರ ಮನಗೆದ್ದಳು. ಆದರೆ ಅಲ್ಲಿ ಆಕೆಯ ಸಂಗೀತ ಪ್ರತಿಭೆಗಿಂತ ಹೆಚ್ಚಾಗಿ ಜಾತಿ ಸೌಹಾರ್ದತೆಗಳ ಗುಣಗಾನಗಳೇ ಮೇಳೈಸಿದವು. ನಿರೂಪಕಿ ಯ 'ಅಸ್ಸಲಾಮ್ ಅಲೈಕುಂ' ನಿಂದ ಪ್ರಾರಂಭವಾದ ಈ ಅನಗತ್ಯ ಪ್ರಲಾಪಗಳು ತೀರ್ಪುಗಾರರ ಮಾತಿನಲ್ಲೂ ಮುಂದುವರೆದವು. ಇವರೆಲ್ಲರ ಮಾತುಗಳು ಆಕೆ ಯಾವುದೋ ಅನ್ಯಗ್ರಹದಿಂದ ಬಂದ ವ್ಯಕ್ತಿಯೇನೋ ಎಂಬಂತಿತ್ತು. ಸಾಲದ್ದಕ್ಕೆ ಎಲ್ಲೋ ಒಂದೆಡೆ ಕೊಂಚ ಪ್ರಚೋದಿಸುವಂತೆಯೂ ಇತ್ತು. ಇವೆಲ್ಲಾ ನಿಜವಾಗಿಯೂ ಅಗತ್ಯವಿತ್ತೇ? ಇದು ಮುಂದುವರೆದು ಇಂತಹದೇ ಉದ್ದೇಶಕ್ಕಿರುವ ಇತರ ಚಾನೆಲ್‌ಗಳಲ್ಲಿ ಪ್ಯಾನೆಲ್ ಚರ್ಚೆಗಳೂ ನಡೆದವು. ಅಂದು ವೃತ್ತಿಪರ ನಿರೂಪಕಿ ಹಾಗೂ ಪ್ರಬುದ್ಧ ತೀರ್ಪುಗಾರರು ತಮ್ಮ ಹೇಳಿಕೆ/ಹೊಗಳಿಕೆಗಳನ್ನು ಆ ಬಾಲಕಿಯ ಹಾಡಿನ ವಿಶ್ಲೇಷಣೆಗೆ ಸೀಮಿತಗೊಳಿಸಿದ್ದರೆ ಪ್ರಾಯಶಃ ಆ ನಂತರದ ಪ್ರತಿಕೂಲ ಪರಿಣಾಮಗಳು ಸಂಭವಿಸುತ್ತಿರಲಿಲ್ಲವೆನ್ನುವುದು ನನ್ನ ಅನಿಸಿಕೆ. ಮುಂದಾದರೂ ಎಲ್ಲಾ ವಾಹಿನಿಗಳು ಹಾಗೂ ನಿರೂಪಕರು ಈ ಬಗ್ಗೆ ಎಚ್ಚರ ವಹಿಸಲಿ.

—ಮಂಗಳೂರು ಕೆ. ಚಂದ್ರ ಬೋಳಾರ

## 'ಹಲೋ ಮಿನಿಸ್ಟರ್' ಖಾಸಗಿ ಅಲ್ಲ

ಸುವರ್ಣ ವಾಹಿನಿಯವರು ನಡೆಸುವ ಹಲೋ ಮಿನಿಸ್ಟರ್ ಕಾರ್ಯಕ್ರಮ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಪರಿಹಾರ ನೀಡುವ ಕಾರ್ಯಕ್ರಮ. ಇತ್ತೀಚೆಗೆ ವೈದ್ಯಕೀಯ ಶಿಕ್ಷಣ ಸಚಿವರು ಭಾಗವಹಿಸಿದ್ದ ಸಮಯದಲ್ಲಿ ಸಚಿವರ ಶ್ರೀಮತಿಯವರು ಕರೆ ಮಾಡಿ 'ಸುಮ್ಮನೆ ಕರೆಮಾಡಿದೆ' ಎಂದು ಹೇಳಿದ್ದು ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರನ್ನು ವಾಹಿನಿ ಸಂಪರ್ಕಿಸಿ ಸಚಿವರೊಟ್ಟಿಗೆ casual ಆಗಿ ಮಾತನಾಡಿಸಿದ್ದು ಕಾರ್ಯಕ್ರಮದ ಸಮಯದ ದುರ್ಬಳಕೆಯೆಂದೇ ಹೇಳಬಹುದು. ವಾಹಿನಿಯವರು ಈ ರೀತಿಯ ಜನಪರ ಕಾರ್ಯಕ್ರಮಗಳನ್ನು ಗಂಭೀರವಾಗಿ ನಡೆಸಿಕೊಡಲಿ, ಸಮಯೋಚಿತವಾಗಿ ಆಲೋಚಿಸಲಿ.

—ರಾಜೀವ್ ಎನ್. ಮಾಗಲ್

## ಚಂದನದಲ್ಲಿ ತಪ್ಪು

ಚಂದನದಲ್ಲಿ ಮಾರ್ಚ್ 15ರ ಥಟ್ ಅಂತ ಹೇಳಿ ಕಾರ್ಯಕ್ರಮದ ಕೊನೆಯ ಪ್ರಶ್ನೆ: ಬಿಹಾರದಿಂದ 2000ರಲ್ಲಿ ಬೇರೆಯಾದ ಒಂದು ರಾಜ್ಯವು ಇನ್ನೂ ತನ್ನ ರಾಜ್ಯಕ್ಕೆ ರಾಜ್ಯದ ಹೂವನ್ನು ಹೆಸರಿಸಿಲ್ಲಾ ಆ ರಾಜ್ಯ ಯಾವುದು? ಅದಕ್ಕೆ ಕೊಟ್ಟ ಉತ್ತರ 'ಛತ್ತೀಸ್ ಗಡ್' ಎಂದು ಹೇಳಿದರು ಮತ್ತು ತದನಂತರದಲ್ಲಿ ಡಾ.ಸೋಮಶೇಖರ್ ಅವರು ಅದರ ಬಗ್ಗೆ ಮಾತನಾಡಿದರು. ಆದರೆ ಸರಿ ಉತ್ತರ ಜಾರ್ಖಂಡ್. ಚಾಸ್ ನಾಲ ದುರಂತದ ಬಗ್ಗೆ ಮಾತನಾಡಿದರು. ಚಾಸ್ ನಾಲ ಇರುವುದು ಜಾರ್ಖಂಡ್‌ನಲ್ಲಿ. ಇಂತಹ ತಪ್ಪುಗಳು ಮುಂದೆ ನುಸುಳದಿರಲಿ ಎಂದು ಆಶಿಸುತ್ತೇನೆ.

—ಮಲ್ಲಿಕಾರ್ಜುನ ಎಂ.

ವಾರದ ಪತ್ರ

## ವಿಶ್ವ-ದೇಶದ ಸುದ್ದಿಗೆ ಪ್ರಾಶಸ್ತ್ಯವಿಲ್ಲ

ಪ್ರಸ್ತುತ ದಿನಗಳಲ್ಲಿ ಹೊಸ ಟಿವಿ ಚಾನೆಲ್‌ಗಳು ಹುಟ್ಟಿಕೊಳ್ಳುತ್ತಲೇ ಇವೆ. ಹೊಸ ಚಾನೆಲ್‌ಗಳೂ– ಹಳೆಯ ಚಾನೆಲ್‌ಗಳಂತೆ– ಅದೇ ಚರ್ವಿತ–ಚರ್ವಣಕ್ಕೆ ಪ್ರಾಶಸ್ತ್ಯ ನೀಡುತ್ತಿರುವುದು ಸತ್ಯ. ವಿಶೇಷವಾಗಿ ಬೆಂಗಳೂರಿನಲ್ಲಿ ನಡೆಯುವ ಗೋಲ್‌ಮಾಲ್, ಅತ್ಯಾಚಾರ– ಕೊಲೆ ಇತ್ಯಾದಿಯನ್ನು ದೋಸೆ ಮಗುಚಿಹಾಕಿದಂತೆ ಹಾಕಿ ವೀಕ್ಷಕರಿಗೆ ಬೋರ್ ಹೊಡೆಸುತ್ತಿರುವುದು ಪ್ರಸ್ತುತ ದೃಶ್ಯ. ಎಲ್ಲಿಯಾದರೂ ವಿಶ್ವ ಸುದ್ದಿ. ದೇಶದ ಉತ್ತರ ಭಾಗದ ಸುದ್ದಿ ಮತ್ತು ವಿವಿಧ ಕ್ರೀಡೆಗಳ ಕುರಿತಾದ ಬಿಸಿ–ಬಿಸಿ ಸುದ್ದಿ ಬೇಕೆನಿಸಿದಾಗ 'ಅನ್ಯಥಾ ಶರಣಂ ನಾಸ್ತಿ' ಎಂಬಂತೆ ಉತ್ತರ ಭಾರತದ ಚಾನೆಲ್ ತಿರುಗಿಸುವುದು ಅನಿವಾರ್ಯ. ಇನ್ನೊಂದು ನೀಗಲಾಗದ ತಲೆನೋವು ಎಂದರೆ ನಿರಂತರ ಪ್ರಕಟಗೊಳ್ಳುವ ಜಾಹೀರಾತುಗಳು. ದೇಶದಲ್ಲಿ ಯಾವುದೇ ಪ್ರಧಾನ ಕ್ರೀಡೆಗಳು ನಡೆಯುತ್ತಿದ್ದರೂ– ಈ ಚಾನೆಲ್‌ಗಳಿಗೆ ಅವು ಕಾಣಿಸುವುದೇ ಇಲ್ಲ. ಹಳೆಯ ಚಾನೆಲ್‌ಗಳ ವರ್ತನೆಯನ್ನು ಪುನಃ ಸೃಷ್ಟಿಸುವ ಚಾಳಿಯಿಂದಾಗಿ ಕನ್ನಡ ಚಾನೆಲ್‌ಗಳು ಸ್ವೀಕಾರಾರ್ಹವಾಗುತ್ತಿಲ್ಲ.

—ಕೋಟೀಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

## ಬಂಧ ತಪ್ಪಿದ ಪದ

ದೂರದರ್ಶನ ಚಂದನ ಪ್ರಸಾರ ಮಾಡುತ್ತಿರುವ `ಥಟ್ ಅಂಥ ಹೇಳಿ` ಜನಪ್ರಿಯ ಕಾರ್ಯಕ್ರಮದಲ್ಲಿ ತಪ್ಪುಗಳ ಹಾವಳಿ ಹೆಚ್ಚಾಗುತ್ತಿದೆ. ಪ್ರತಿ ಕಾರ್ಯಕ್ರಮದಲ್ಲಿ ಒಂದಲ್ಲ ಒಂದು ತಪ್ಪು ಕಾಣಿಸಿಕೊಳ್ಳುತ್ತಿದೆ. ಕಾರ್ಯಕ್ರಮ ನಿರ್ವಾಹಕರ ತೀರ್ಪಿನಿಂದ ಜಾಣರೂ ದಡ್ಡರಾಗಿ ಪರಿಣಮಿಸುತ್ತಿದ್ದಾರೆ.

ದಿನಾಂಕ 15.03.2017 (ಬುಧವಾರ) ಪ್ರಸಾರವಾದ ಕಾರ್ಯಕ್ರಮದಲ್ಲಿ ಸರಿ ಉತ್ತರವನ್ನು ತಪ್ಪು ಎಂದು ಹೇಳಲಾಯಿತು.

ಮ ಅಕ್ಷರದಿಂದ ಆರಂಭಗೊಳ್ಳುವ ಆಳವಾದ ನೀರಿನ ಪ್ರದೇಶಕ್ಕೆ ಆಯ್ಕೆಗಳು ಬರುವ ಮೊದಲೇ ಸ್ಪರ್ಧಿಯೊಬ್ಬರು ಮಡು ಎಂಬ ಉತ್ತರ ನೀಡಿದರು. ಆದರೆ ಇವರ ಉತ್ತರ ಸರಿ ಇಲ್ಲ ಎಂದು ಹೇಳಿ, ಆಯ್ಕೆ ಬಂದ ನಂತರ ಮಡುವು ಎಂದು ಉತ್ತರಿಸಿದವರಿಗೆ ಬಹುಮಾನ ನೀಡಲಾಯಿತು. ವಾಸ್ತವವಾಗಿ ಮಡು ಎಂದರೂ ಆಳವಾದ ನೀರಿನ ಪ್ರದೇಶ ಎಂಬ ಅರ್ಥ ಇದೆ. ತೀರ್ಮಾನ ಕೊಡುವ ಮೊದಲು ತಜ್ಞರ ಜೊತೆ ಚರ್ಚಿಸಿ ಪ್ರಸಾರ ಮಾಡುವುದು ಒಳ್ಳೆಯದು.

—ಅ.ನಾ.ಪ್ರಹ್ಲಾದರಾವ್

## ಪುಟ್ಟ ಕ್ಯಾನ್ಸರ್ ಗೌರಿ

ಕ್ಯಾನ್ಸರ್ ರೋಗದ ವಿಚಾರವಾಗಿ ಜನರಲ್ಲಿ ತಪ್ಪು ಭಾವನೆ ಇದೆ. ಇಂತಹ ತಪ್ಪು ಭಾವನೆಗಳಿಗೆ ತುಪ್ಪ ಸುರಿಯುತ್ತಿವೆ ಟಿ.ವಿ. ಧಾರಾವಾಹಿಗಳು! ಕ್ಯಾನ್ಸರ್ ಪೀಡಿತರಿಗೆ ಧೈರ್ಯ ತುಂಬಿ ಬದುಕಲು ಪ್ರೇರೇಪಿಸಬೇಕೇ ಹೊರತು ಅಂತಹ ರೋಗಿಗಳನ್ನು ಹೆದರಿಸಿ ಇನ್ನಷ್ಟು ಭಯಭೀತರನ್ನಾಗಿಸಿ ವಿಕೃತ ಭಾವನೆ ಮೆರೆಯುವುದು ಮಾನವೀಯತೆಯಲ್ಲ.

ಪುಟ್ಟ ಗೌರಿ ಮದುವೆಯ ಗೌರಿಗೆ ಬ್ಲಡ್ ಕ್ಯಾನ್ಸರ್. ಅವಳು ಬದುಕಿರುವುದು ಇನ್ನು ಒಂದೇ ತಿಂಗಳು. ಇದಕ್ಕೆ ಯಾವುದೇ ಚಿಕಿತ್ಸೆ ಇಲ್ಲವೇ? ಬ್ಲಡ್ ಕ್ಯಾನ್ಸರ್ ಇದೆ ಎಂದ ಮಾತ್ರಕ್ಕೆ ಯಾವುದೇ ಚಿಕಿತ್ಸೆ ಪಡೆಯದೆ ಗಂಡನೊಂದಿಗೆ ಗೋಳಾಡುತ್ತ ಸ್ವರ್ಗ–ನರಕಗಳ ಕಲ್ಪನೆಯಲ್ಲಿ ಮುಳುಗುವುದೇ?

ಸಾಲದ್ದಕ್ಕೆ ಪುಟ್ಟಗೌರಿಯ ಗಂಡ ಎಂಬಿಬಿಎಸ್ ಪದವೀಧರ! ವಿಪರ್ಯಾಸವೆಂದರೆ ವೈದ್ಯಕೀಯ ಪರೀಕ್ಷೆಯ ವರದಿ ಓದಿ ತನ್ನ ಪತ್ನಿಗೆ ಬ್ಲಡ್ ಕ್ಯಾನ್ಸರ್ ಇದೆಯೇ ಇಲ್ಲವೇ ಎಂದು ಹೇಳಲಾಗದ ದಡ್ಡ! ಕ್ಯಾನ್ಸರ್ ವಿಚಾರವಾಗಿ ಜನರನ್ನು ಭಯಭೀತರನ್ನಾಗಿಸುತ್ತಿರುವ ಪುಟ್ಟ ಗೌರಿಯ ತಂಡಕ್ಕೆ ಬ್ರೇಕ್ ಹಾಕಬೇಕಾಗಿದೆ.

—ಪಿ.ಜೆ. ರಾಘವೇಂದ್ರ, ಮೈಸೂರು

## ಈ ಅವಮಾನ ಸರಿಯೇ?

ಟಿವಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾದ ಕಲಾವಿದರನ್ನು ಕೊನೆಯ ಕ್ಷಣದಲ್ಲಿ ಕಾರ್ಯಕ್ರಮದಿಂದಲೇ ತೆಗೆದು ಹಾಕುವುದು ಎಷ್ಟರ ಮಟ್ಟಿನ ನ್ಯಾಯ? ಇದಾಗಿದ್ದು ಮಡಿಕೇರಿಯಲ್ಲಿ! ಫೆ. 26ರಂದು ಮಡಿಕೇರಿಯಲ್ಲಿ ಚಂದನವಾಹಿನಿಯ 'ಮಧುರ ಮಧುರವೀ ಮಂಜುಳ ಗಾನ' ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕಾಗಿ ಆಯ್ಕೆಯಾದ ಕಲಾವಿದರಿಗೆ ದಿನಾಂಕ 25ರಂದು ರಿಹರ್ಸಲ್ ಹಮ್ಮಿಕೊಳ್ಳಲಾಗಿತ್ತು. ಆಯ್ಕೆಯಾದವರಿಗೆ ಕಾರ್ಯಕ್ರಮದಲ್ಲಿ ಹಾಡುವ ಅವಕಾಶವಿತ್ತು. ಮರುದಿನ 1 ಗಂಟೆಗೆ ಹಾಡಲು ಸಿದ್ಧವಾಗಿ ಹೋದ ಹೊತ್ತಿಗೆ ಗಾಯನ ರದ್ದಾಗಿದೆಯೆಂದು ಕಳುಹಿಸಿದರು.

—ಶೋಭಾ ಭಟ್ ಬೆಂಗಳೂರು